ಈ) ರಾಷ್ಟ್ರೀಯ ಹೆದ್ದಾರಿ–13ರ ಕಾಮಗಾರಿಗಾಗಿ ಗುತ್ತಿಗೆಯ ಅಂತಿಮಗೊಂಡಿದ್ದು, ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಪ್ರಾರಂಭಿಸಬೇಕಿದೆ.

ಉ) ಬಂದಿದೆ.

ಊ) ಮೇಲಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಋ) ಬಂದಿದೆ. .

ಎ) ಮೇಲಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬಿಳಿ ಅಡಿಕೆಗೆ ಬೆಂಬಲ ಬೆಲೆ

513 (991) ಶ್ರೀ ಖಾದರ್.ಯು.ಟಿ (ಮಂಗಳೂರು) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರು ಬೆಳೆದ ಬಿಳಿ ಅಡಿಕೆಗೆ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆಯಿಂದ ಕೃಷಿಕರಿಗೆ ಯಾವುದೇ ಪ್ರಯೋಜನ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಿಳಿ ಅಡಿಕೆಗೆ ಹೆಚ್ಚಿನ ಬೆಂಬಲ ಬೆಲೆಯನ್ನು ಘೋಷಿಸಲು ಸರ್ಕಾರ ಚಿಂತಿಸುವುದೇ?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಸರ್ಕಾರವು ಘೋಷಿಸಿರುವ ಬೆಂಬಲ ಬೆಲೆ ರೈತರಿಗೆ ಪ್ರಯೋಜವಾಗಿದೆ. ಸರ್ಕಾರಿ ಆದೇಶ ಸಂ.ಸಇ/04/ ಎಂಆರ್ಇ/2009. ದಿನಾಂಕ: 10.09.2009 ಹಾಗೂ ದಿ:01.01.2010ರ ಸರ್ಕಾರಿ ಆದೇಶಗಳಂತೆ ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ಬಿಳಿ ಅಡಿಕೆಯನ್ನು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಖರೀದಿಸಲು ಮಂಜೂರಾತಿ ನೀಡಲಾಗಿದ್ದು ಅದರಂತೆ ಕ್ಯಾಂಪ್ಕೋ ಸಂಸ್ಥೆಯು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ 11 ಖರೀದಿ ಕೇಂದ್ರಗಳಲ್ಲಿ 1008 ಜನ ರೈತರಿದ ರೂ.1.82 ಕೋಟಿ ವೆಚ್ಚದಲ್ಲಿ 2428 ಕ್ವಿಂಟಾಲ್‌ಗಳಷ್ಟು ಬಿಳಿ ಅಡಿಕೆಯನ್ನು ಖರೀದಿಸಿರುತ್ತದೆ.

ಆ) ಅಡಿಕೆ ಬೆಳೆಗಾರ ಹಿತದೃಷ್ಟಿಯಿಂದ ರೈತರು ಬೆಳೆದ ಎಫ್.ಎ.ಕ್ಯೂ. ಗುಣಮಟ್ಟದ ಚಾಲಿ ಪ್ರಭೇಧದ ಅಡಿಕೆಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿಯಲ್ಲಿ ನಿಗಧಿಪಡಿಸಿರುವ ಬೆಂಬಲ ಬೆಲೆಯಾದ ಪ್ರತೀ ಕ್ವಿಂಟಾಲ್‌ಗೆ ರೂ.6,900/– ಕ್ಕೆ ರಾಜ್ಯ ಸರ್ಕಾರವು ರೂ.600/– ರಂತೆ ಪ್ರೋತ್ಸಾಹ ಧನವನ್ನು ನೀಡುವುದನ್ನು ಸೇರಿಸಿಕೊಂಡು ಬಿಳಿ ಅಡಿಕೆಯನ್ನು ಪ್ರತೀ ಕ್ವಿಂಟಾಲ್‌ಗೆ ರೂ.7,500/–ಗಳಂತೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ರೈತರಿಂದ ಖರೀದಿಸಲಾಗುತ್ತಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಚಾಲಿ ಪ್ರಭೇಧದ ಅಡಿಕೆಯ ಮಾದರಿ ಬೆಲೆಯು ಪ್ರತೀ ಕ್ವಿಂಟಾಲ್‌ಗೆ ರೂ.5,000/–ರಿಂದ ರೂ.7,891/–ರವರೆಗೆ ಇದ್ದು ಹೆಚ್ಚಿನ ಮಾರುಕಟ್ಟೆಗಳಲ್ಲಿ ಸರ್ಕಾರವು ಘೋಷಿಸಿದ ಕನಿಷ್ಪ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಮಾರಾಟವಾಗುತ್ತಿದೆ.

ರೇಷನ್ ಕಾರ್ಡ್‌ಗಳ ವಿತರಣೆಯಲ್ಲಿ ಲೋಪದೋಷ

515 (994) ಶ್ರೀ ಖಾದರ್. ಯು.ಟಿ. (ಮಂಗಳೂರು) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ನೀಡಿರುವ ರೇಷನ್‌ಕಾರ್ಡ್ (APL & BPL) ಗಳಲ್ಲಿ ಉಂಟಾಗಿರುವ ಲೋಪದೋಷಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರಕ್ಕೆ ಎಷ್ಟು ಸಮಯ ಬೇಕಾಗುವುದು;

ಇದರಿಂದ ಬಡ ಜನತೆಗೆ ಆಹಾರ ವಿತರಣೆ ಸಮರ್ಪಕವಾಗಿ ದೊರಕಿಸಿಕೊಡಲು ಶೀಘ್ರ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಹೆಚ್.ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಕೆಲವು ಪಡಿತರ ಚೀಟಿಗಳಲ್ಲಿ ಲೋಪದೋಷಗಳಿದ್ದು, ಗಮನಕ್ಕೆ ತಂದಾಗ ಇವುಗಳನ್ನು ಸರಿಪಡಿಸಲು ತಾಲ್ಲೂಕು ಮಟ್ಟದ ಬ್ಯಾಂಕ್ ಆಫೀಸ್ ಗಳನ್ನು ಪ್ರಾರಂಭಿಸಿ ಅವುಗಳಲ್ಲಿ ಪರಿಹಾರ ನೀಡಲಾಗುತ್ತಿದೆ.